ಈ) ಈ ವಸತಿನಿಲಯಗಳ ನಿರ್ವಹಣೆಗಾಗಿ 90–91ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣವೆಷ್ಟು;

ಉ) ಈವರೆಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನೀಲಯಗಳು:–

ರಾಜಾಜಿನಗರ, ಗಂಗೇನಹಳ್ಳಿ, ಬಸವೇಶ್ವರ ನಗರ, ಜಯನಗರ (ಬಾಲಕಿಯರ), ಹೆಬ್ಬಾಳು, ಕೆಂಗೇರಿ ವೈಟ್ ಫೀಲ್ಡ್, ಜಾಲಹಳ್ಳಿ ಹಾಗೂ ದೇವಸಂದ್ರಗಳಲ್ಲಿ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:–

ವಿಜಯನಗರ, ಗಂಗೇನಹಳ್ಳಿ, ಬಾಪೂಜಿನಗರ, ಹಾಗೂ ವಸಂತನಗರ (ಬಾಲಕಿಯರ)ಗಳಲ್ಲಿ.

ಒಟ್ಟು:– ಮೆಟ್ರಿಕ್ ಪೂರ್ವ 9 ವಿದ್ಯಾರ್ಥಿನಿಲಯಗಳು

ಮೆಟ್ರಿಕ್ ನಂತರದ 4 ವಿದ್ಯಾರ್ಥಿನಿಲಯಗಳು

ಖಾಸಗಿ ವಿದ್ಯಾರ್ಥಿನಿಲಯಗಳು:–

ಶ್ರೀ. ವಿಶ್ವೇಶ್ವರಸ್ವಾಮಿ ವಿದ್ಯಾಪೀಠ ಎಜುಕೇಷನಲ್ ಸೊಸೈಟಿ ಹಾಸ್ಟೆಲ್ ಸೂಲಿಗೆರೆ, ಬೆಂಗಳೂರು ದಕ್ಷಿಣ.

ಆ) ಶ್ರೀ. ವಿಶ್ವೇಶ್ವರಸ್ವಾಮಿ ವಿದ್ಯಾಪೀಠ ಎಜುಕೇಷನಲ್ ಸೊಸೈಟಿ ಹಾಸ್ಟೆಲ್ ಸೂಲಿಗೆರೆ, ಬೆಂಗಳೂರು ದಕ್ಷಿಣ.

ಇ)	ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ	666
	ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ	50
	ಒಟ್ಟು ನಿಲಯಾರ್ಥಿಗಳು	716

ಈ) 41.00 ಲಕ್ಷ ರೂ.ಗಳು

ಉ) 14.54 ಲಕ್ಷ ರೂ.ಗಳು.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ನೇಮಕಾತಿ ಮಾಡುವಾಗ ಲೋಪದೋಷಗಳಾಗಿರುವ ಬಗ್ಗೆ

624. ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ನೇಮಕ ಮಾಡುವಾಗ ಬಹಳಷ್ಟು ಲೋಪದೋಷಗಳಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಬಂದಿದೆ.

ಆ) ನಿಗಮದ ಕಾರ್ಯದರ್ಶಿಗಳನ್ನು ದಿನಾಂಕ 12–5–89ರಂದು ಅಮಾನತ್ತಿನಲ್ಲಿರಿಸಿ ಅವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದೆ.

ವೈಸ್ ಛೇರ್ಮನ್ : ಮಂಡಿಸಲಾಯಿತು.

ಶ್ರೀ. ಪಿ.ಸಿ. ಸಿದ್ಧನಗೌಡರ್ : ನನ್ನದೂ ಒಂದು ಪ್ರಶ್ನೆ ಇತ್ತು.

ವೈಸ್ ಛೇರ್ಮನ್ : ಪ್ರಶ್ನೆಯನ್ನು ಕಳಿಸಿದ್ದೀರಿ, ಟೈಮ್ ಬೇಕು ಎಂದು ಕೇಳಿದ್ದಾರೆ.

ಶ್ರೀ ಪಿ.ಸಿ.ಸಿದ್ಧನಗೌಡರ್ : ಇವೊತ್ತು ಅಜೆಂಡಾದಲ್ಲಿ ಇದೆ.

ಶ್ರೀ ಬಿ. ಶಿವಣ್ಣ : ನಿನ್ನೆ ಮಾನ್ಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಮತ್ತೆ ನಿಮಗೆ ಕಳಿಸಿಕೊಡುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಆರ್. ಧರ್ಮಸಿಂಗ್ (ಗೃಹ ಸಚಿವರು):– (ಅರಣ್ಯ ರಾಜ್ಯ ಮಂತ್ರಿ ಅವರ ಪರವಾಗಿ):– ಮಾನ್ಯ ಅಧ್ಯಕ್ಷರೇ, "1956ನೇ ಇಸವಿಯ ಕಂಪನಿಗಳ ಶಾಸನದ 619 (ಎ) ಕಲಮಿನ ಮೇರೆಗೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಗಾ ನಿಗಮ ನಿಯಮಿತ, ಕರ್ನಾಟಕ ರಾಜ್ಯ ವೀವರ್ಸ್ ನಿಯಮಿತ ಹಾಗೂ ಮೈಸೂರು ಮ್ಯಾಚ್ ಕಂಪನಿ ನಿಯಮಿತಗಳ 14ನೇ ವಾರ್ಷಿಕ ವರದಿ ಹಾಗೂ 1986–87ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ವೈಸ್ ಛೇರ್ಮನ್ : ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಎಂ. ಪಿ. ವೆಂಕಟೇಶ್ (ಉಪಾಧ್ಯಕ್ಷರ ಪರವಾಗಿ) :– ಮಾನ್ಯ ಅಧ್ಯಕ್ಷರೆ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಆರನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ವೈಸ್ ಛೇರ್ಮನ್ : ಒಪ್ಪಿಸಲಾಯಿತು.

(ಅರ್ಜಿಗಳನ್ನು ಒಪ್ಪಿಸುವುದು)

ಶ್ರೀ ರಂಗದೇವರಾಯಲು – (ಮಾನ್ಯ ಸದಸ್ಯರು ಗೈರು ಹಾಜರಿ)

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮಂಡಲದ ಸರ್ವೆ ನಂ.1 ರಲ್ಲಿನ ಜನರಿಗೆ ಮನೆ ನಿವೇಶನಗಳ ಮಂಜೂರಾತಿ ಬಗ್ಗೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮಂಡಲದ ಸರ್ವೆ ನಂಬರ್ 36ರಲ್ಲಿನ ಜಮೀನನ್ನು ಕೃಷಿಗಾಗಿ ಮಂಜೂರು ಮಾಡುವ ಬಗ್ಗೆ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬೆಟ್ಟದ ಮನೆಯ ರಸ್ತೆಯ ದುರಸ್ತಿ ಬಗ್ಗೆ ಸಂಬಂಧಪಟ್ಟಂತೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಹಳೆ ಸೇತುವೆಗಳಿಗೆ ದುರಸ್ತಿ ಮಾಡಿ ನೀರು ನಿಲ್ಲಿಸುವ ಬಗ್ಗೆ ಸಂಬಂಧಿಸಿದ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ವೈಸ್ ಛೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ಖಾಸಗಿ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ಮಂಡಳಿಯವರು ಹೆಚ್ಚಿನ ತೇವಣಿಯನ್ನು ಸುಲಿಗೆ ಮಾಡುತ್ತಿರುವುದು

ಗಮನ ಸೆಳೆಯುವ ಸೂಚನೆಗಳು

ಶ್ರೀ ಎ.ಕೆ ಅನಂತಕೃಷ್ಣ :– ಮಾನ್ಯ ಅಧ್ಯಕ್ಷರೇ ನಾನು ಬೆಂಗಳೂರು ನಗರದ ಶಾಲೆಗಳು ಮತ್ತು ಕೆಲವು ಕಾಲೇಜು ವಿಷಯದಲ್ಲಿ ಹೇಳಬಯಸುತ್ತಿದ್ದೇನೆ. ನಮ್ಮ ಘನ ಸರ್ಕಾರಕ್ಕೆ ಬಹಳ ಕಾಲದಿಂದ ಗೊತ್ತಿದೆ. ಬೆಂಗಳೂರು ನಗರದಲ್ಲಿ ವಿದ್ಯಾರ್ಥಿಗಳು ಶಾಲೆಗಳಿಗೆ ಅಡ್ಮಿಷನ್‌ಗೆ ಹೋಗಬೇಕಾಗಿದ್ದರೆ ಎಷ್ಟು ಕಷ್ಟಪಡುತ್ತಿದ್ದಾರೆ ಎಂತ. ಈ ವಿಷಯವನ್ನು ಪದೇ ಪದೇ ನಾನು ಸರ್ಕಾರದ ಗಮನಕ್ಕೆ ತಂದು ಸಾಕಷ್ಟು ರೀತಿಯಲ್ಲಿ ತಿಳುವಳಿಕೆ ಕೊಟ್ಟಿದ್ದೆ. ಆದರೂ ಕೂಡ ಸರ್ಕಾರ ಯಾತಕ್ಕೆ ಈ ವಿಷಯದಲ್ಲಿ ಗಮನ ಕೊಡುತ್ತಿಲ್ಲ ಎಂದು ಅರ್ಥ ಆಗುತ್ತಿಲ್ಲ.